(ಗೊಂದಲ)

ಅಧ್ಯಕ್ಷರು: ಈ ರೀತಿ ಒಂದೊಂದಾಗಿ ಹೇಳುತ್ತಾ ಹೋದರೆ ಇದಕ್ಕೆ ಅಂತ್ಯ ಇರುವುದಿಲ್ಲ. ಏಕೆಂದರೆ ರಾಜ್ಯಪಾಲರ ಭಾಷಣದಲ್ಲಿ ಮೇಲಿನ ವಂದನಾ ನಿರ್ಣಯಕ್ಕೆ ಚರ್ಚೆ ಮುಂದುವರಿಸಬೇಕಾಗಿದೆ.

ವಿಷಯ (ಆ) ಕೊಡವ ಸಂಸ್ಕೃತಿ ಉಳಿಸುವ ಬಗ್ಗೆ

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಕೊಡವರು ಅವರ ಸಂಸ್ಕೃತಿ ಉಳಿಯಬೇಕೆಂದು ನೂರಾರು ಜನರು ಬಂದು ಧರಣಿ ಕುಳಿತಿದ್ದಾರೆ. ಅವರ ಸಮಸ್ಯೆಗಳೇನು ಎನ್ನುವುದನ್ನು ನೋಡಿ ನ್ಯಾಯಬದ್ಧವಾಗಿರುವುದನ್ನು ಬಗೆಹರಿಸುವುದಕ್ಕೆ ಸರ್ಕಾರ ಗಮನ ಕೊಡಬೇಕು. ಅದಕ್ಕೆ ಸ್ವಲ್ಪ ಅವಕಾಶ ಮಾಡಿಕೊಟ್ಟರೆ ಒಳ್ಳೆಯದು.

ಶ್ರೀ ವಾಟಾಳ್ ನಾಗರಾಜ್: ಕೊಡವರ ಸಂಸ್ಕೃತಿ ಸಂಪೂರ್ಣವಾಗಿ ನಾಶವಾಗುತ್ತಿದೆ. ಕೊಡವರನ್ನು ಉಳಿಸಬೇಕು. ಕೊಡವರ ಸಂಸ್ಕೃತಿ ಉಳಿಯಬೇಕು. ಕೊಡಗಿನ ಅಭಿವೃದ್ಧಿಯಾಬೇಕು. ಕೊಡವರ ಸಂಸ್ಕೃತಿ ಪ್ರತಿನಿತ್ಯ ನಾಶವಾಗುತ್ತದೆ. ಆ ಸಂಸ್ಕೃತಿ ಉಳಿಯುವುದಕ್ಕೆ ವಿಶೇಷವಾದ ಯೋಜನೆ ತಯಾರಾಗಬೇಕು. ವಿಶೇಷ ಅನುಕೂಲಗಳನ್ನು ಮಾಡಬೇಕು. ಈ ಬಗ್ಗೆ ಸರ್ಕಾರ ಏನು ನಿರ್ಧಾರ ಕೈಗೊಂಡಿದೆ? ಸರ್ಕಾರದ ನೀತಿ ಏನು? ಅದನ್ನು ಹೇಳಬೇಕು. ಅಲ್ಲಿರತಕ್ಕಂಥ ಶ್ರೀ ನಾಚಪ್ಪ ಎನ್ನುವವರು ಸರ್ಕಾರಕ್ಕೆ ಅನೇಕ ಸಲ ಮನವಿ ಕೊಟ್ಟಿದ್ದಾರೆ.

ಅಧ್ಯಕ್ಷರು: ಆಯಿತು ನಾಗರಾಜ್‌ರವರೇ, ಗಮನ ಸೆಳೆದಿದ್ದೀರಿ. ಗಮನ ಸೆಳೆಯುವವರಿಗೆಲ್ಲಾ ಅವಕಾಶವಿಲ್ಲ. ಆದರೂ ಗಮನ ಸೆಳೆದಿದ್ದಾರೆ. ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಾರೆ. ತಾವು ಕುಳಿತುಕೊಳ್ಳಿ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ,

ಶ್ರೀ ವೈಜನಾಥ ಪಾಟೀಲ್: ಮಾನ್ಯ ಅಧ್ಯಕ್ಷರೇ, ಒಂದು ನಿಮಿಷ ಮಾತನಾಡುತ್ತೇನೆ.

ಅಧ್ಯಕ್ಷರು: ದಯವಿಟ್ಟು ಕುಳಿತುಕೊಳ್ಳಬೇಕು.

ವಿಷಯ: (ಇ) ಅಲಮಟ್ಟಿ ಅಣೆಕಟ್ಟು – ಮುಲ್ಲಾಮರಿ ಯೋಜನೆ

ಶ್ರೀ ವೈಜನಾಥ ಪಾಟೀಲ್: ಆಲಮಟ್ಟಿ ಆಣೆಕಟ್ಟು ಬಗ್ಗೆ ಇದುವರೆವಿಗೆ ನಮ್ಮಷ್ಟು ಯಾರೂ ಹೋರಾಟ ಮಾಡಿರಲಿಲ್ಲ. ನಾನು ಒಂದು ನಿಮಿಷ ಮಾತನಾಡಿಬಿಡುತ್ತೇನೆ.

ಅಧ್ಯಕ್ಷರು: ಅವಕಾಶ ಕೊಡುತ್ತೇನೆ. ಈಗ ದಯಮಾಡಿ ತಾವು ಕುಳಿತುಕೊಳ್ಳಬೇಕು. ಹಿರಿಯ ಸದಸ್ಯರಾಗಿ ನೀವು ಹೀಗೆ ಮಾಡಿದರೆ ಹೇಗೆ?

ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ): ನಮ್ಮ ಚಿಂಚೋಳಿ ತಾಲ್ಲೂಕಿನ ಮುಲ್ಲಾಮರಿ ಯೋಜನೆಗೆ ಸಿಗಬೇಕಾದ ನೀರನ್ನು ಕಟ್ ಮಾಡಿದ್ದಾರೆಯೇ? ಇದು ಬೇರೆ ರಾಜ್ಯಗಳ ಜೊತೆ ಸುಪ್ರೀಂ ಕೋರ್ಟ್‌ನಲ್ಲಿ ಹೋರಾಡುವುದಕ್ಕೆ ಬದಲಾಗಿ ನಮ್ಮ ರಾಜ್ಯದಲ್ಲಿ ಎಲ್ಲಿ ನೀರು ಹೆಚ್ಚು ಮಾಡಬೇಕು, ಎಲ್ಲಿ ಕಡಿಮೆ ಮಾಡಬೇಕೆನ್ನುವಂಥದ್ದರ ಬಗ್ಗೆ ಸರ್ಕಾರ ತಪ್ಪು ದಾರಿಯಲ್ಲಿ ನಡೆದಿದೆ. ಏಕೆಂದರೆ ಈಗ ಆಲಮಟ್ಟಿ ಹೋರಾಟ .....

ಅಧ್ಯಕ್ಷರು: ಈಗ ಈ ನೀರಾವರಿ ವಿಷಯಕ್ಕೆ ಸಂಬಂಧಿಸಿದ ಚರ್ಚೆಯನ್ನು ಮುಕ್ತಾಯ